ನೋಡಿ ಒಳಕ್ಕೆ ಓಡಿಹೋಗಿ ಒಂದು ತಂಬಿಗೆಯಲ್ಲಿ ನೀರು ತಂದಳು. ಆ ನೀರಿನ ತಂಬಿಗೆಯನ್ನು ಅಂಗಳಕ್ಕೆ ಎಸೆದು, 'ಆ ಬೋಸುಡಿ ಮಗನನ್ನು ಕರೆಯಲು ಹೇಳು' ಎಂದರು. ಗೌಡ್ತಿ ನಡುಗುತ್ತಾ 'ಯಾರನ್ನ...' ಎಂದಳು ತಡವರಿಸುತ್ತಾ. 'ಅವನ್ನೇ ಆ ಬೋಸುಡಿ ಮಗನ್ನ, ದಿವಸ ಕೈಬಟ್ಲು ಅನ್ನ ಹಾಕಿ ತಿನ್ನಿಸ್ತೀಯಲ್ಲಾ ಅವನ್ನ...' ಗೌಡರ ಮಾತು ಯಾರಿಗೆ ಅರ್ಥವಾಗುತ್ತೆ. ದಿವಸ ಆಳುಗಳು ತುಂಬಾ ಜನ ಮನೆಯಲ್ಲಿ ಉಣ್ತಾರೆ. ಯಾರು ಎಂದು ಗೊತ್ತಾಗದೇ ಗರಬಡಿದಂತೆ ನಿಂತುಕೊಂಡಿದ್ದಾಗಲೇ ನಮ್ಮಜ್ಜ ಮರಿಗೌಡ ಬಗ್ಗಿ ನಿಂತಿದ್ದ ಗೌಡಕಿ ಮೇಲೆ, ಅವನನ್ನು ಕಂಡ ಗೌಡ್ರು... 'ಲೇ, ಹೋಗೋ, ಆ ಬೋಸುಡಿ ಮಗ ಹನುಮನನ್ನು ಎಳಕೊಂಡು ಬಾ... ಆ ಕೆರೆಯ ಮೇಲೆ ಕುಳಿತಿದ್ದಾನೆ' ಎಂದರು.

ನಮ್ಮಜ್ಜ ಓಡುತ್ತಾ ಓಡುತ್ತಾ ಹೋದ. ಗೌಡ್ರು ಬುಸು ಬುಸು ಗುಟ್ಟುತ್ತಾ ಜಗಲಿಯಲ್ಲಿ ಓಡಾಡುತ್ತಿದ್ದಾಗ... ಹನುಮನನ್ನು ರಟ್ಟೆ ಹಿಡಿದು ತಂದ ನನ್ನಜ್ಜ.

ಹನುಮನಿಗೆ– ಆ ದಿನ ಹಕೀಕತ್ ಏನಾಯ್ತು ಎಂದರೆ ಅವನಿಗೆ ಸ್ವಲ್ಪ ಎಣ್ಣೆ ಹಾಕೋ ಅಭ್ಯಾಸ ಇತ್ತು. ಆದಿನ ಎಣ್ಣೆ ಹಾಕಿ ಕುಳಿತಿದ್ದ ಬೀಡಿ ಸೇದುತ್ತಿದ್ದ ಅವನಿಗೆ ಗೌಡ್ರು ಬಂದಿದ್ದಾಗಲಿ, ಹೋಗಿದ್ದಾಗಲಿ ಒಂದು ಚೂರೂ ಗೊತ್ತಾಗಲಿಲ್ಲ. ಈ ಗೌಡ್ರು ಈ ಕಡೆ ಬಂದಾಗ ಹನುಮನ ತಲೆ ಮೇಲೆ ಕೆರೆ ನೀರು ಹಾಕಿ 'ಏಯ್, ಹನುಮ ಗೌಡ್ರು ಬಂದಿದ್ದರಲ್ಲೋ' ಎಂದಾಗ ಆತ ನೀರಿನಿಂದ ನಡುಗುತ್ತಿದ್ದವನು ಗೌಡ್ರು ಹೆಸರು ಕೇಳಿ ಇನ್ನಷ್ಟು ನಡುಗುತ್ತಿರುವಾಗಲೇ ನನ್ನಜ್ಜ ಹೋಗಿ ಅವ ರಟ್ಟೆ ಹಿಡಿದು 'ಬಾ, ಗೌಡ್ರು ಕರಿತಿದ್ದಾರೆ' ಎಂದದ್ದು.

ಹನುಮನನ್ನು ಕಂಡ ಕೂಡಲೇ ಸಿಟ್ಟು ನೆತ್ತಿಗೇರಿದ್ದ ಗೌಡ್ರು ಏನು, ಎತ್ತ ಎಣಿಸದೇ, 'ನನ್ನ ಎದುರು ಕುಳಿತುಕೊಳ್ಳೋ ಧೈರ್ಯ ಬಂತೇನೋ ಗುಲಾಮ ಸೂಳೇಮಗನೆ' ಎಂದವರೇ ಅವನಿಗೆ ಒದ್ದು ಬಿಟ್ಟರು. ಅವರು ಒದೆಯುವುದು ಸಹಜ ಎಲ್ಲ ಆಳುಗಳಿಗೆ. ಆದರೆ ಇವತ್ತು ಗೌಡ್ರು ಒದ್ದದ್ದು ಹನುಮನ ಆಯ ಸ್ಥಳಕ್ಕೆ ಬಿದ್ದು ಲಂಬೋ ಲಂಬವಾಗಿ 'ಅಮ್ಮಾ...' ಎನ್ನುತ್ತಾ ಹನುಮ ನೆಲಕ್ಕುರುಳಿದ.

ಗೌಡ್ತಿ ಮುಸಿ ಮುಸಿ ಅತ್ತಳು ಸೆರಗು ಬಾಯಲ್ಲಿಟ್ಟು. ಗೌಡ್ರಿಗೆ ಸಿಟ್ಟು ಇಳಿಯಿತು, ಲೋಕಕ್ಕೆ ಬಂದರು. ಇದ್ದವನು, ನೋಡಿದವನು ಒಬ್ಬನೇ. ತೋಟದ ಹೊಳೆಯಲ್ಲಿ ಹೆಣ ತೇಲಾಡಿತು... 'ಅಯ್ಯೋ ಪಾಪ, ಪಾಯಿಖಾನೆಗೆ ಹೋದವನು ನೀರಿನಲ್ಲಿ ಬಿದ್ದನಂತೆ...' ಎಂಬ ಮಾತು ಇಡೀ ಹಳ್ಳಿಯಲ್ಲಿ ವ್ಯಾಪಿಸಿತು.

ಗೌಡ್ರು ಅಲ್ಲವೇ... ಬುದ್ಧಿ ಚುರುಕಾಗಿ ಕೆಲಸ ಮಾಡುತ್ತಿತ್ತು. ಅನುಭವ ನೋಡಿ. ಇದಾದ ಎರಡು ಮೂರು ದಿನಗಳಲ್ಲೇ ನಮ್ಮಜ್ಜನನ್ನು ಕರೆದು ಗೌಡ್ರು 'ಏ ಮರ್ಯಾ ಆ ಹನುಮ ಮಾಡುತ್ತಿದ್ದ ಗದ್ದೆ ನೀನು ಗೇಣಿ ಮಾಡಿಕೋ...' ಎಂದರಂತೆ. ಈ ಹನುಮನ ಸಾವನ್ನು ನೋಡಿದ್ದು ನಮ್ಮಜ್ಜ ಮತ್ತು ಗೌಡ್ತಿ. ಈ ನಮ್ಮಜ್ಜ ಎಲ್ಲಿಯಾದರೂ ಹೇಳಿ ಏನೊ ಆಪತ್ತು ತರ್ತಾನೆ ಅಂತ ಯೋಚನೆ ಬಂತೋ... ಆ ಏನೋ.. ದೊಡ್ಡವರ ವಿಚಾರ ಬಿಡಿ... ಗೌಡ್ತಿ ಸದಾ ಅಳುತ್ತಿದ್ದಳಂತೆ. ಇದನ್ನು ನೋಡಿದ ಗೌಡ್ರು ಒಂದುದಿನ ಜ್ಞಾನೋದಯ ಆದವರಂತೆ ಹೆಂಡತಿಯನ್ನು ಕರೆದು, ಮರ್ಯಾನನ್ನು ಕರೆದು... 'ಮರ್ಯಾ ಕೇಳಿಸಿಕೋ, ನನ್ನ ಹೆಂಡತಿ ತಲೆ ಮೇಲೆ ಕೈ ಇಟ್ಟು ಆಣೆ ಮಾಡ್ತೀನಿ ಇನ್ನು ಮೇಲೆ ಯಾರ ಮೇಲೂ ಕೈಮಾಡಲ್ಲ.' ಹಾಗೇ ನಡೆದುಕೊಂಡರು.

ಮುಂದೆ ಸ್ವಲ್ಪ ಕೇಳಿ...

ಈ ಜಮೀನು ಗೇಣಿ ಮಾಡಿಕೊಂಡಿದ್ದ ಅಜ್ಜನ ಬದುಕು ಸ್ವಲ್ಪ ಸುಧಾರಿಸಿತು. ನಾಲ್ಕು ಕಾಸು ಕೈಗೆ ಬಂತು. ನನ್ನಪ್ಪ ಬಚ್ಚೇಗೌಡ ಪ್ರಾಯಕ್ಕೆ ಬರ್ತಾ ಇದ್ದ. ಇಂಥಾ ಸಂದರ್ಭದಲ್ಲಿ ಮೈಸೂರಿನ ಮಹಾಸ್ವಾಮಿಗಳು ರಾಜರು, ವಿಶ್ವೇಶ್ವರಯ್ಯ ಎಲ್ಲಾ ಸೇರಿ ಅಣೆಕಟ್ಟು ಕಟ್ಟಿದ ಪ್ರಯುಕ್ತ ನಮ್ಮ